<u>ದಿನಾಂಕಃ 02-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .</u>

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಪಿ ಆರ್ ಕೆ ವಕೀಲರಿಂದಃ</u>**

1. ಹೇಮಪ್ಪನಿಗೆ ಖರೀದಿ ರಕಂ ಹಣ ಕೊಟ್ಟ ಬಗ್ಗೆ ರಿಜಿಸ್ಟರ್ ಪತ್ರ ಇರುತ್ತದೆ. ಖರೀದಿ ಪತ್ರಕ್ಕೆ ಹೇಮಪ್ಪ ಸಹಿ ಹಾಕಿರುವುದಿಲ್ಲ. ಆದರೆ ಅವರ ಜಿಪಿಎ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ. ಹೇಮಪ್ಪನಿಗೆ ಹಣ ಕೊಟ್ಟ ಬಗ್ಗೆ ಅವರಿಂದ ಬೇರೆ ಯಾವುದೆ ದಾಖಲೆ ಪಡೆದಿರುವುದಿಲ್ಲ.ಹೇಮಪ್ಪನಿಗೆ ಖರೀದಿ ರಕಂ ಹಣ ಪಾವತಿ ಮಾಡಿರುತ್ತೇವೆ ಎಂದು ಕ್ರಯ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನಗೆ ಕನ್ನಡ ಓದಲು ಬರುತ್ತದೆ. ನಿಡಿ-19 ರಿಂದ 23 ರಲ್ಲಿ ಹೇಮಪ್ಪನಿಗೆ ಹಣ ಪಾವತಿ ಮಾಡಿದ್ದೇವೆ ಎಂದು ಬರೆದಿಲ್ಲ ಎಂದರೆ ಸಾಕ್ಷಿ ಹಣ ಪಾವತಿ ಮಾಡಿದ್ದೇವೆ ಎಂದು ಬರೆದಿದೆ ಆದರೆ ಹೇಮಪ್ಪನಿಗೆ ಪಾವತಿ ಮಾಡಿದ್ದೇವೆ ಎಂದು ಬರೆದಿಲ್ಲ. ನಾನು ಹೇಮಪ್ಪ, ಆತನ ಹೆಂಡತಿ ಹಾಗೂ ಹೆಣ್ಣು ಮಕ್ಕಳ ಹತ್ತಿರ ಯಾವುದೆ ಹಣ ಕೊಟ್ಟಿಲ್ಲ ಮತ್ತು ಹೇಮಪ್ಪ, ಹೆಂಡತಿ ಮತ್ತು ಹೆಣ್ಣು ಮಕ್ಕಳು 1 ನೆ ಪ್ರತಿವಾದಿಗೆ ಯಾವುದೆ ಒಟ್ಟು ಮೊಕ್ತಿಯಾರ್ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

2. ನಾನು 1 , 2 ನೆ ಪ್ರತಿವಾದಿ ಹಾಗೂ 4 ನೆ ಪ್ರತಿವಾದಿ ಮತ್ತು ಸಾಕ್ಷಿದಾರರು ಸೇರಿ ಒಟ್ಟು ಮೊಕ್ತಿಯಾರ್ ಪತ್ರವನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹೇಮಪ್ಪ ಎಲ್ಲಾ ಹೆಣ್ಣು ಮಕ್ಕಳಿಗೆ ಆಸ್ತಿ ಕೊಡುತ್ತಾನೆ ಎಂದು ಹೇಳಿ ನಾನು ಮತ್ತು 1 ನೆ ಪ್ರತಿವಾದಿ ಸೇರಿ ಅನುಸೂಚಿ-ಸಿ ನಲ್ಲಿ ತೋರಿಸಿರುವ ಕ್ರಯ ಪತ್ರಗಳನ್ನು ಹುಟ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಗಳು ವಾದಿ ಮತ್ತು 5 ನೆ ಪ್ರತಿವಾದಿಗೆ ಬಾಂದಾಯಿಸುವುದಿಲ್ಲ ಎಂದರೆ ಸರಿಯಲ್ಲ. ಹೇಮಪ್ಪನಿಗಾಗಲಿ, ಅವರ ಹೆಂಡತಿ ಮತ್ತು ಹೆಣ್ಣು ಮಕ್ಕಳಿಗಾಗಿ ಆಸ್ತಿ ಮಾರಾಟ ಮಾಡುವ ಯಾವುದೆ ಇಚ್ಚೆ ಇರಲಿಲ್ಲ ಎಂದರೆ ಸರಿಯಲ್ಲ. ಅನುಸೂಚಿ ಬ ಆಸ್ತಿಯ ನಂಬರ್ ನನಗೆ ಹೇಳಲು ಬರುವುದಿಲ್ಲ.

3. ಶೆಡ್ಯೂಲ್ ಬ ಆಸ್ತಿ ಬಾಬ್ತು ದಿಃ 29-11-2014 ರಂದು ನೊಂದಾಯಿತ ಕ್ರಯ ಪತ್ರ ಆಗಿರುತ್ತದೆ. ದಿಃ 15-03-2019 ರಂದು 2 ನೆ ಪ್ರತಿವಾದಿ ಸದರಿ ಶೆಡ್ಯೂಲ್ ಬ ಆಸ್ತಿಯನ್ನು 1 ನೆ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ. ಆ ನಂತರ ಸದರಿ ಆಸ್ತಿ ಯಾರ ಯಾರ ಹೆಸರಿಗೆ ಖರೀದಿ ಪತ್ರ ಆಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಸದರಿ ಕ್ರಯ ಪತ್ರಗಳಿಗೆ ನಾನು ಸಾಕ್ಷಿಯಾಗಿ ಸಹಿ ಹಾಕಿರುವುದಿಲ್ಲ. ಸದರಿ ಕ್ರಯ ಪತ್ರ ಆಗುವಾಗ ನಾನು ಹಾಜರಿರಲಿಲ್ಲ. ಸಾಕ್ಷಿ ಮುಂದುವರೆದು ಮಾತುಕತೆ ಆಗುವಾಗ ಹಾಜರಿದ್ದೆ ಎಂದು ಹೇಳುತ್ತಾರೆ. ಅನುಸೂಚಿ-ಸಿ ನಲ್ಲಿ

ತೋರಿಸಿದ ಕ್ರಯ ಪತ್ರಗಳ ಆಧಾರದ ಮೇಲೆ ನನಗೆ ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳಲ್ಲಿ ಯಾವುದೆ ಹಕ್ಕು ಪ್ರಾಪ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಈಗಲೂ ಸಹ ಹೇಮಪ್ಪ, ಆತನ ಹೆಂಡತಿ ಮತ್ತು ಮಕ್ಕಳ ಸಾಮೂಹಿಕ ಕಬ್ಜಾದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಅನುಸೂಚಿ–ಸಿ ರಲ್ಲಿ ತೋರಿಸಿದ ಖೊಟ್ಟಿ ಕ್ರಯ ಪತ್ರಗಳ ಆಧಾರದ ಮೇಲೆ ಯಾರೂ ಸಹ ದಾವಾ ಆಸ್ತಿಯ ಕಬ್ಜೆಗೆ ಬಂದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.